**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 25/2025**

**ಚಾ.ಸಾಃ 3, ಪ್ರಾ.ಸಾಃ 2**

| | |
|---|---|
| ಸಾಕ್ಷಿದಾರನ ಹೆಸರು | ದಾವುದ್ ಖಾನ್ |
| ತಂದೆಯ ಹೆಸರು | ಅಬ್ದುಲ್ ರೆಹಮಾನ್ |
| ವಯಸ್ಸು | 57 ವರ್ಷಗಳು |
| ಉದ್ಯೋಗ | ಕೂಲಿ |
| ವಾಸ್ತವ್ಯ | ಸರಳಗಿ |

**ಸಾಕ್ಷಿಯನ್ನು ದಿನಾಂಕಃ 12-09-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ದಿನಾಂಕ 28-12-2024 ರಂದು ಹೊನ್ನಾವರ ಗೇರುಸೊಪ್ಪಾ ರಸ್ತೆಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಉಪ್ಪೋಣಿ ಬ್ರಿಡ್ಜ ಹತ್ತಿರ ಒಂದು ಆಟೋ ಅಪಘಾತವಾಗಿದ್ದು ಸದರಿ ಅಪಘಾತದ ವಿಚಾರವಾಗಿ ಪೋಲೀಸರು ದಿನಾಕ 03-01-2025 ರಂದು ಸಂಜೆ 05-30 ರ ಸಮಯದಲ್ಲಿ ಪಂಚನಾಮೆ ಮಾಡಲು ಬಂದಿದ್ದು ಚಾಸಾ-7 ರವರು ತೋರಿಸಿದ ಅಪಘಾತ ಸ್ಥಳದಲ್ಲಿ ಪೋಲೀಸರು ಸ್ಥಳ ಪಂಚನಾಮೆ ಮಾಡಿ, ಒಂದು ಕಚ್ಚಾ ನಕಾಶೆ ತಯಾರಿಸಿ, ಸದರಿ ಸ್ಥಳದಲ್ಲಿ ಇದ್ದ ಆಟೋದ ಬಳಿ ನಿಲ್ಲಿಸಿ ಸುಮಾರು 5 ಫೋಟೋಗಳನ್ನು ತೆಗೆದಿರುತ್ತಾರೆ. ಸ್ಥಳ ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ನೋಡುತ್ತಿದ್ದು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. 5 ಫೋಟೋಗಳನ್ನು ನಿಪಿ-3 ರಿಂದ 7 ಎಂದು ಗುರುತಿಸಲಾಯಿತು. ನನ್ನ ಜೊತೆ ಚಾಸಾ-2 ರವರು ಸಹ ಹಾಜರಿದ್ದು ಸಹಿ ಮಾಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ. ಆರ್. ನಾಯ್ಕರಿಂದಃ**

ಈ ದಿನ ಚಾಸಾ-7 ರವರು ನ್ಯಾಯಾಲಯಕ್ಕೆ ಹಾಜರಾಗಿದ್ದಾರೆ. ಪಂಚನಾಮೆ ಬರೆಯಲು ನಾನು ಮಾಹಿತಿ ನೀಡಿರುತ್ತೇನೆ. ಅಪಘಾತ ಸ್ಥಳದ ರಸ್ತೆ ಯಾವ ದಿಕ್ಕಿನಿಂದ ಯಾವ ದಿಕ್ಕಿಗೆ ಹೋಗುತ್ತದೆ ಎಂದು ನನಗೆ ಹೇಳಲು ಗೊತ್ತಾಗುವುದಿಲ್ಲ. ಅಪಘಾತ ಸ್ಥಳವನ್ನು ಚಾಸಾ-7 ರವರು ತೋರಿಸಿರುತ್ತಾರೆ. ರಾಷ್ಟ್ರೀಯ ಹೆದ್ದಾರಿಯು ಸುಮಾರು 24 ಅಡಿ ಅಗಲ ಇದೆ. ಉಪ್ಪೋಣಿ ಸರಳಗಿ ರಸ್ತೆಯ ಎಡ ಅಂಚಿನಿಂದ ಸುಮಾರು 7 ಅಡಿ ಒಳಗೆ ರಸ್ತೆಯ ಮೇಲೆ ಅಪಘಾತ ಆಗಿರುತ್ತದೆ. ಅಪಘಾತ ಆದ ಸ್ಥಳದಲ್ಲಿ ರಕ್ತದ ಕಲೆ ಇತ್ತು ಮತ್ತು ಅಲ್ಲಿ ಆಟೋವನ್ನು ಪಕ್ಕದಲ್ಲಿ ನಿಲ್ಲಿಸಲಾಗಿತ್ತು. ಪೋಲೀಸರು ಪಂಚನಾಮೆಯನ್ನು ಕೈಯಲ್ಲಿ ಬರೆದಿದ್ದಾರೆ. ಸ್ಥಳದಲ್ಲಿಯೇ ಪೋಲೀಸರು ನನ್ನ ಸಹಿ ತೆಗೆದುಕೊಂಡಿರುತ್ತಾರೆ. ಮೃತ ಬಾಲಕ ನನ್ನ

ತಮ್ಮನ ಮಗ. ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ, ಪೋಲೀಸ್ ಠಾಣೆಯಲ್ಲಿ ಪಂಚನಾಮೆಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**